ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಸಂಖ್ಯೆ: ಈಕರಸಾ:ಕೇಕ:ಆಮಾವ್ಯ:565:2017-18 ದಿನಾಂಕ 07.02.2017

ಇವರಿಗೆ,
ಮುಖ್ಯ ಮೌಲ್ಯಮಾಪನ ಅಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ,
**ಬೆಂಗಳೂರು.**

ಮಾನ್ಯರೆ,

ವಿಷಯ: ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೌಲ್ಯಮಾಪನ ವರದಿಯ ಮೇಲೆ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅನುಸರಣಾ ವರದಿ ಸಲ್ಲಿಸುವ ಕುರಿತು.
ಉಲ್ಲೇಖ: ಕ.ಮೌ.ಪ್ರಾ.49 ಕೆಡಿಪಿ-2014 ದಿನಾಂಕ 14.01.2015.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೌಲ್ಯಮಾಪನ ವರದಿಯ ಅಧ್ಯಾಯ-5ರ ಅಡಿಯಲ್ಲಿ ಅಧ್ಯಯನ ತಂಡದ ಸದಸ್ಯರು ಮಾಡಿರುವ ವಿವಿಧ ಸಲಹೆ ಮತ್ತು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಈ ಮುಂದಿನಂತೆ ಸಲ್ಲಿಸಲಾಗಿದೆ.

1. **ಸಾಂಸ್ಥಿಕ ವಿಷಯಗಳು :**

- **ವೃತ್ತಿಪರ ನಿರ್ದೇಶಕರುಗಳ ನೇಮಕ** : ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ..
- **ವೃತ್ತಿಪರ ಚಾರ್ಟೆಡ್ ಅಕೌಂಟೆಂಟ್‌ಗಳ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ :** ಪ್ರಮುಖ ಹಣಕಾಸು ವಿಷಯಗಳಲ್ಲಿ ಖಾಸಗಿ ಚಾರ್ಟೆಡ್ ಅಕೌಂಟೆಂಟ್‌ಗಳ ಸಲಹೆಯನ್ನು ಪಡೆದುಕೊಳ್ಳಲಾಗುತ್ತಿದೆ. ಒಂದು ಚಾರ್ಟೆಡ್ ಅಕೌಂಟೆಂಟ್ ಮತ್ತು ಒಂದು ಕಾಸ್ಟ್ ಅಕೌಂಟೆಂಟ್ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯ ಔಚಿತ್ಯದ ಬಗ್ಗೆ ಪರಿಶೀಲಿಸಲಾಗುತ್ತಿದೆ.
- **ಹೆಚ್ಚಿನ ಬಡ್ಡಿದರದಲ್ಲಿ ಸಾಲ ತೆಗೆದುಕೊಳ್ಳುತ್ತಿರುವ ಬಗ್ಗೆ** : ಸದರಿ ಸಲಹೆ/ಶಿಫಾರಸ್ಸನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- **ಕಂಪನಿ ಸೆಕ್ರೆಟರಿ ಹುದ್ದೆಯ ನೇಮಕ** : ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.
- **ಖಾಲಿ ಇರುವ ಪ್ರಮುಖ ಹಿರಿಯ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ** : ಪಟ್ಟಿ ಮಾಡಿರುವ ಬಹುತೇಕ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ವಿಜಯಪುರ, ರಾಯಚೂರು ಮತ್ತು ಬೀದರ ವಿಭಾಗಗಳಲ್ಲಿ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ನಿಯೋಜನೆ ಕ.ರಾ.ರ.ಸಾ.ಸಂಸ್ಥೆ ವತಿಯಿಂದ ಮಾಡಬೇಕಾಗಿದೆ.
- **ಖಾಲಿ ಇರುವ ಚಾಲನಾ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ :** 2015-16ನೇ ಸಾಲಿನಲ್ಲಿ 2945 ಸಂಖ್ಯೆಯ ಚಾಲನಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಹಾಲಿ ಕೊರತೆ ಮಂಜೂರಾತಿಗಿಂತ ಕೇವಲ 124 ಸಂಖ್ಯೆ ಆಗಿರುತ್ತದೆ. (ಅಗತ್ಯತೆ 14566 ಕರ್ತವ್ಯದ ಮೇಲಿರುವವರು 14442)

  2017-18ನೇ ಸಾಲಿನಲ್ಲಿ 503 ಚಾಲನಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಯೋಜಿಸಲಾಗಿದೆ.
- **ಕಾರ್ಯನಿರ್ವಾಹಕ ನಿರ್ದೇಶಕರ ನೇಮಕ** : ಸದರಿ ಹುದ್ದೆಯನ್ನು ಸೃಜಿಸಲು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

2. **ಕಾರ್ಯಾಚರಣೆ ವಿಷಯಗಳು :**

- **ಇತರ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಚಾಲನಾ ಸಿಬ್ಬಂದಿಯ ಅನುಪಾತ** : ಸಿಬ್ಬಂದಿ ಬಾಬ್ತು ಆಗುತ್ತಿರುವ ಅಧಿಕ ವೆಚ್ಚದ ಹಿನ್ನೆಲೆಯಲ್ಲಿ ಗರಿಷ್ಠ ವಾಹನ ಬಳಕೆ ಮತ್ತು ಚಾಲನಾ ಸಿಬ್ಬಂದಿಗಳನ್ನು ಇನ್ನಷ್ಟು ಸಮರ್ಥವಾಗಿ ಬಳಸಿಕೊಳ್ಳಲು ಕಾಲಕಾಲಕ್ಕೆ ಅನುಸೂಚಿಗಳನ್ನು ಪರಿಷ್ಕರಿಸಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 124
ದಿನಾಂಕ 9/2/17
ಗಣಕ ಸಂಖ್ಯೆ ............
ದಿನಾಂಕ ............

ಸಾರಿಗೆ ಸದನ - ಮುಖ್ಯರಸ್ತೆ - ಕಲಬುರಗಿ - ಪಿನ್ ೫೮೫ ೧೦೨ - ಕರ್ನಾಟಕ - ☎ ೦೮೪೭೨-೨೨೮೯೯೨ - ಫ್ಯಾಕ್ಸ್ : ೨೩೭೨೫೮ - E-mail : mdnekrtcglb@gmail.com - www. nekrtc.com

ಸಾರಿಗೆ ಆದಾಯ ಮತ್ತು ಚಾಲನಾ ಸಿಬ್ಬಂದಿ ಬಳಕೆ ಸಾಧಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಹಾಲಿ ಸಿಬ್ಬಂದಿ ಪ್ರಮಾಣ ಅನುಸೂಚಿ ಒಂದಕ್ಕೆ 5.13 ಆಗಿರುತ್ತದೆ.

- **ವಾಹನಗಳ ವಯೋಮಾನದ ಬಗ್ಗೆ ಸೂಕ್ಷ್ಮ ವಿಶ್ಲೇಷಣೆ ಕೈಗೊಳ್ಳುವುದು** : ಕ್ರಮ ಕೈಗೊಳ್ಳಲಾಗಿದೆ.
- **ಅವಘಡ ಮತ್ತು ಕಿ.ಮೀ. ರದ್ದತಿಯನ್ನು ಕಡಿಮೆಗೊಳಿಸುವುದು** : ಕಾಲದಿಂದ ಕಾಲಕ್ಕೆ ವಿಭಾಗಗಳಿಗೆ ಸೂಕ್ತ ನಿರ್ದೇಶನ ನೀಡಲಾಗುತ್ತಿದ್ದು, ತೆಗೆದುಕೊಳ್ಳಲಾದ ಪರಿಣಾಮಕಾರಿ ಕ್ರಮಗಳಿಂದ ಅವಘಡ ಪ್ರಮಾಣ ಕಳೆದ ಸಾಲಿನದ ಪ್ರಮಾಣದಲ್ಲೇ (0.09) ಸ್ಥಿರಗೊಂಡಿದೆ. ಆದರೆ, ಕಿ.ಮೀ.ರದ್ದತಿ ಪ್ರಮಾಣದಲ್ಲಿ ಕಳೆದ ಸಾಲಿನ ಶೇ.6.2ರಿಂದ ಶೇ.6.8ಗೆ ಏರಿಕೆ ಕಂಡು ಬಂದಿದ್ದು, ವಾಹನ ಸ್ಥಿತಿಗತಿ ಮತ್ತು ಚಾಲನಾ ಸಿಬ್ಬಂದಿಯ ಅನಧಿಕೃತ ಗೈರು ಹಾಜರಾತಿಯ ಮೇಲೆ ಮತ್ತಷ್ಟು ಹತೋಟಿ ಸಾಧಿಸಿ, ಮುಂದಿನ ದಿನಗಳಲ್ಲಿ ಸುಧಾರಿತ ಕಾರ್ಯನಿರ್ವಹಣೆಯನ್ನು ತರಲು ಕ್ರಮ ಕೈಗೊಳ್ಳಲಾಗಿದೆ.
- **ಅಧಿಕ ಉತ್ಪಾದನಾ ಬೆಳವಣಿಗೆ ಮತ್ತು ಅನುತ್ಪಾದನಾ ವೆಚ್ಚವನ್ನು ಕಡಿತಗೊಳಿಸುವುದು** : ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಪ್ರಮುಖ ನಿಯತಾಂಕಗಳ ಗುರಿಗಳನ್ನು ವೈಜ್ಞಾನಿಕವಾಗಿ ನಿಗದಿ ಪಡಿಸಲಾಗಿದ್ದು, ನಿಯತಕಾಲಿಕವಾಗಿ ಅವುಗಳ ಸಾಧನೆಯನ್ನು ಪರಾಮರ್ಶಿಸಿ, ಸೂಕ್ತ ಸರಿಪಡಿಸುವ ಕ್ರಮಗಳನ್ನು ಘಟಕ, ವಿಭಾಗ ಮತ್ತು ಕೇಂದ್ರ ಕಛೇರಿ ಮಟ್ಟದಲ್ಲಿ ಕೈಗೊಳ್ಳಲಾಗುತ್ತಿದೆ.
- **ಅಕ್ಯೂಪನ್ಸಿ ರೆಷಿಯೋ ಉತ್ತಮಗೊಳಿಸುವುದು** : ಖಾಸಗಿ ವಾಹನಗಳ ಅನಧಿಕೃತ ಕಾರ್ಯಾಚರಣೆ, ಹದಗೆಟ್ಟ ರಸ್ತೆ ಇವೇ ಮುಂತಾದವುಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಯೂಪನ್ಸಿ ರೆಷಿಯೋ ಕಡಿಮೆಯಾಗಿದೆ. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರಲಾಗಿದೆ. ಇನ್ನುಳಿದಂತೆ ವರದಿಯಲ್ಲಿ ನೀಡಿರುವ ಸಲಹೆಗಳನ್ನು ಕಾರ್ಯ ರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ.
- **ಆದಾಯರಹಿತ ಕಿ.ಮೀ. ಪ್ರಮಾಣವನ್ನು ಕನಿಷ್ಠ ಮಟ್ಟಕ್ಕೆ ತರುವುದು** : ಕಲಬುರಗಿ ನಗರದಲ್ಲಿ ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಜಿಲ್ಲಾಡಳಿತವು ವಾಹನಗಳ ನಗರ ಪ್ರವೇಶವನ್ನು ನಿರ್ಬಂಧಿಸಿದ್ದರಿಂದ ವರ್ತುಲ ರಸ್ತೆಯ ಮೂಲಕ ನಗರವನ್ನು ಸುತ್ತು ಹಾಕಿ ಪ್ರವೇಶಿಸಬೇಕಾಗಿರುವುದರಿಂದ ಆದಾಯರಹಿತ ಕಿ.ಮೀ. ಅಧಿಕಗೊಳ್ಳಲು ಪ್ರಮುಖ ಕಾರಣವಾಗಿದೆ. ಉಳಿದಂತೆ ಬೇರೆ ಕಾರಣಗಳಿಂದ ಉಂಟಾಗುತ್ತಿರುವ ಆದಾಯರಹಿತ ಕಿ.ಮೀ. ನಿಯಂತ್ರಣದಲ್ಲಿರುತ್ತದೆ. ಆದಾಯರಹಿತ ಕಿ.ಮೀ. ಪ್ರಮಾಣ ಪ್ರಸಕ್ತ ಸಾಲಿನಲ್ಲಿ ಶೇ.3.4 ಇದ್ದು, ಕಳೆದ ಸಾಲಿಗಿಂತ ಶೇ.0.4ರಷ್ಟು ಕಡಿಮೆಯಾಗಿದೆ.
- **ಖಾಸಗಿ ಡೀಸಲ್ ಬಂಕ್‌ಗಳ ಮೂಲಕ ಡೀಸಲ್ ಖರೀದಿಸುತ್ತಿರುವ ಬಗ್ಗೆ** : ಹಾಲಿ ಪರಿಸ್ಥಿತಿ ಬದಲಾಗಿದ್ದು, ಮೆ॥ ಬಿ.ಪಿ.ಸಿ.ಎಲ್. ವತಿಯಿಂದ ನೇರವಾಗಿ ಡೀಸಲ್‌ನ್ನು ಖರೀದಿಸಲಾಗುತ್ತಿದೆ.
- **ಪಾರ್ಶ್ವ ಕಿ.ಮೀ. ರದ್ದತಿಯನ್ನು ಕಡಿಮೆಗೊಳಿಸಲು ಪ್ರೋತ್ಸಾಹಧನ ಯೋಜನೆಯನ್ನು ಜಾರಿಗೆ ತರುವುದು** : ಹಾಲಿ ಜಾರಿಯಲ್ಲಿರುವ ಪ್ರೋತ್ಸಾಹಧನ ಯೋಜನೆಯಲ್ಲಿ ಕಂಡು ಬಂದಿರುವ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಿ, ಹೊಸ ಯೋಜನೆಯನ್ನು ಜಾರಿ ತರುವ ಸಮಯದಲ್ಲಿ ಸದರಿ ಶಿಫಾರಸ್ಸನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಈ ನಿಟ್ಟಿನಲ್ಲಿ ಕ.ರಾ.ರ.ಸಾ. ಸಂಸ್ಥೆಯಲ್ಲಿ ಪರಿಶೀಲಿಸಲಾಗುತ್ತಿದ್ದು, ಅಲ್ಲಿ ತೆಗೆದುಕೊಳ್ಳುವ ಕ್ರಮಗಳನ್ನು ಈ ಸಂಸ್ಥೆಯಲ್ಲೂ ಅಳವಡಿಸಿಕೊಳ್ಳಲಾಗುವುದು.
- **ಅನಧಿಕೃತ ಗೈರು ಹಾಜರಾತಿ ನಿಯಂತ್ರಿಸುವುದು** : ಗೈರು ಹಾಜರಾದ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದ್ದು, ಒಂದು ವೇಳೆ ಅವರು ಪೂರಕವಾಗಿ ಸ್ಪಂದಿಸದಿದ್ದಲ್ಲಿ ಮಾತ್ರ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದ್ದು, ಪ್ರಕರಣದ ಗಂಭೀರತೆಗನುಗುಣವಾಗಿ ಶಿಕ್ಷೆ ವಿಧಿಸಲಾಗುತ್ತಿದೆ. ಮಿಗಿಲಾಗಿ, ಪ್ರಸ್ತುತ ಘಟಕಗಳಲ್ಲಿ ಗಣಕೀಕೃತ ರಜೆ ನಿರ್ವಹಣೆ ವ್ಯವಸ್ಥೆ ಜಾರಿಗೆ ಬಂದ ನಂತರ ಅನಧಿಕೃತ ಗೈರು ಹಾಜರಾತಿಯ ಪ್ರಕರಣಗಳು ಗಣನೀಯವಾಗಿ ತಗ್ಗಿರುವುದು ಕಂಡು ಬರುತ್ತಿದೆ.
- **ಲೋಡ್ ಫ್ಯಾಕ್ಟರ್ ಉತ್ತಮಪಡಿಸುವುದು** : ಲೋಡ್ ಫ್ಯಾಕ್ಟರ್ ಹೆಚ್ಚಿಸಲು, ಮಾರ್ಗಗಳನ್ನು ಗುರುತಿಸಿ, ಅಂತಹ ಮಾರ್ಗಗಳನ್ನು ವಾಹನಗಳ ಕಾರ್ಯಾಚರಣೆ ಮಾಡುವ ಪ್ರಕ್ರಿಯೆ ಸತತವಾಗಿ ಚಾಲ್ತಿಯಲ್ಲಿದೆ. ಈಗಾಗಲೇ ಇಂತಹ ಸಾಕಷ್ಟು ಮಾರ್ಗಗಳನ್ನು ಗುರುತಿಸಿ, ಕಾರ್ಯಾಚರಣೆ ಮಾಡಲಾಗುತ್ತಿದೆ. ಅದೇ ರೀತಿ ಪೀಕ್ ಅವರ್ ಮತ್ತು ನಾನ್-ಪೀಕ್ ಅವರ್‌ಗೆ ತಕ್ಕಂತೆ ಅನುಸೂಚಿಗಳ ಫ್ರಿಕ್ವೆನ್ಸಿಗಳನ್ನು ಕಲ್ಪಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- **ಪೀಕ್ ಅವರ್ ವೇಳೆಯಲ್ಲಿ ಹೆಚ್ಚುವರಿ ಫ್ರಿಕ್ವೆನ್ಸಿ ಒದಗಿಸಿ ಕಾರ್ಯಾಚರಣೆ ಮಾಡುವ ಮೂಲಕ ಆದಾಯ ಹೆಚ್ಚಿಸುವುದು** : ಕ್ರಮ ಕೈಗೊಳ್ಳಲಾಗಿದೆ. ಪ್ರಮುಖ ಬಸ್ ನಿಲ್ದಾಣ/ನಿಯಂತ್ರಣ ಕೇಂದ್ರಗಳಲ್ಲಿ ಸಂಚಾರ ನಿಯಂತ್ರಕರುಗಳನ್ನು ನಿಯೋಜಿಸಲಾಗಿದ್ದು, ಅವರುಗಳು ಸಾರ್ವಜನಿಕರಿಗೆ ಅಗತ್ಯ ಮಾಹಿತಿಯನ್ನು ಒದಗಿಸುತ್ತಿದ್ದಾರೆ. ಸಕಾಲಿಕ ಕಾರ್ಯಾಚರಣೆ ಮತ್ತು ಎಲ್ಲಾ ಟ್ರಿಪ್‌ಗಳನ್ನು ಕಾರ್ಯಾಚರಿಸುವ ಮೂಲಕ ಪ್ರಯಾಣಿಕರಿಗೆ ನಂಬಲರ್ಹ ಸೇವೆಯನ್ನು ಒದಗಿಸಿ, ಅವರ ವಿಶ್ವಾಸ ಗಳಿಸಲಾಗುತ್ತಿದೆ.

- **ಜೆ.ಎನ್. ನರ್ಮ್ ವಾಹನಗಳನ್ನು ವೇಗದೂತ ಮತ್ತು ಲಾಭದಾಯಕ ಮಾರ್ಗಗಳಲ್ಲಿ ಕಾರ್ಯಾಚರಿಸುವುದು** : ಜೆ.ಎನ್.ನರ್ಮ್ ಯೋಜನೆಯಡಿಯಲ್ಲಿ ಈಗಾಗಲೇ 229 ವಾಹನಗಳನ್ನು **ರೂ. 52.21 ಕೋಟಿ** ವೆಚ್ಚದಲ್ಲಿ (ವ್ಯಾಟ್ ಹೊರತುಪಡಿಸಿ) ಖರೀದಿಸಲಾಗಿದ್ದು, ಯೋಜನೆಯ ಉದ್ದೇಶದಂತೆ ಅವುಗಳನ್ನು ನಗರಸಾರಿಗೆ ಸೇವೆಯಾಗಿ ಕಾರ್ಯಾಚರಿಸಲಾಗುತ್ತಿದೆ.

3. **ಆರ್ಥಿಕ ವಿಷಯಗಳು :**

- **ಡೀಸಲ್ ಬೆಲೆ ಹೆಚ್ಚಾದ ಕೂಡಲೇ ಪ್ರಯಾಣ ದರಗಳನ್ನು ಏರಿಸಲು ಆಗುತ್ತಿರುವ ವಿಳಂಬ** : ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಈ ಅಧಿಕಾರವನ್ನು ಆಯಾಯ ನಿಗಮಗಳಿಗೆ ನೀಡುವ ಬಗ್ಗೆ ಸರ್ಕಾರದಲ್ಲಿ ತೀರ್ಮಾನವಾಗಬೇಕಾಗಿದೆ.
- **ಮೋಟಾರು ವಾಹನ ತೆರಿಗೆ ಉಳಿಸಿಕೊಳ್ಳುವುದು** : ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಇನ್ನು ಮುಂದಿನ ಐದು ವರ್ಷಗಳವರೆಗೆ ಸರ್ಕಾರದಿಂದ ಈ ಸೌಲಭ್ಯವನ್ನು ವಿಸ್ತರಿಸಲು ಕೋರಲಾಗಿದೆ.
- **ಡೀಸಲ್ ಮೇಲಿನ ತೆರಿಗೆಗಳನ್ನು ಕಡಿಮೆಗೊಳಿಸುವುದು** : ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ವ್ಯಾಟ್ ತೆರಿಗೆ ಪಾವತಿಯಿಂದ ವಿನಾಯತಿ ನೀಡುವಂತೆ ರಾಜ್ಯ ಸರ್ಕಾರವನ್ನು ಕೋರಲಾಗಿದೆ.

4. **ಸಾಮಾನ್ಯ ವಿಷಯಗಳು :**

- **ಬೇಸಿಗೆ ಕಾಲದಲ್ಲಿ ಹೆಚ್ಚು ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುವುದು**: ಕ್ರಮ ಕೈಗೊಳ್ಳಲಾಗಿದೆ.
- **ಸಾರ್ವಜನಿಕರ ಬೇಡಿಕೆಗಳನ್ನು ಸಂಪೂರ್ಣವಾಗಿ ಈಡೇರಿಸುವುದು**: ವಿಶೇಷ ಸಂದರ್ಭಗಳಾದ ಜಾತ್ರೆ, ಹಬ್ಬ ಹರಿದಿನಗಳಲ್ಲಿ ಬೇಡಿಕೆಗನುಗುಣವಾಗಿ ಹೆಚ್ಚುವರಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- **ಬಸ್ ಒಂದಕ್ಕೆ ಸಿಬ್ಬಂದಿ ಪ್ರಮಾಣವನ್ನು 4.75ಕ್ಕೆ ತರುವುದು**: ಕ್ರಮ ಕೈಗೊಳ್ಳಲಾಗುತ್ತಿದೆ.
- **ಲಾಭದಾಯಕ ಟ್ರಿಪ್‌ಗಳನ್ನು ರದ್ದುಗೊಳಿಸದಂತೆ ಎಚ್ಚರವಹಿಸುವುದು**: ಕ್ರಮ ಕೈಗೊಳ್ಳಲಾಗಿದೆ.
- **ಸಿಬ್ಬಂದಿ ಉತ್ಪಾದಕತೆ, ವಾಹನ ಸಮೂಹ ಬಳಕೆ ಮತ್ತು ಅಕ್ಯೂಪೆನ್ಸಿ ರೆಷಿಯೋ ಇವುಗಳನ್ನು ಉತ್ತಮಪಡಿಸುವುದು**: ಈ ನಿಯತಾಂಕಗಳ ವಿಭಾಗವಾರು ಮತ್ತು ಘಟಕವಾರು ಗುರಿಗಳನ್ನು ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಲಾಗಿದ್ದು, ಸಾಧನೆಯನ್ನು ನಿಯತಕಾಲಿಕವಾಗಿ ಸಮೀಕ್ಷಿಸಿ, ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.
- **ನೇಮಕಾತಿ, ತರಬೇತಿ, ಕಾರ್ಯನಿರ್ವಹಣಾ ಫಲಿತಾಂಶಗಳ ಸಮೀಕ್ಷೆ ಇತ್ಯಾದಿ, ವಿಷಯಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು** : ಈ ವಿಷಯಗಳಲ್ಲಿ ಲಭ್ಯವಿರುವ ಆಧುನಿಕ ತಂತ್ರಜ್ಞಾನಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ.
- **ಕಾರ್ಯಾಚರಣಾ ದಕ್ಷತೆಯನ್ನು ಉತ್ತಮಪಡಿಸುವುದು** : ವರದಿಯಲ್ಲಿ ತಿಳಿಸಿರುವ ವಿಧಾನಗಳಿಗೆ ಮೊದಲಿನಿಂದಲೂ ಆದ್ಯತೆ ನೀಡಲಾಗುತ್ತಿದ್ದು, ಅದನ್ನು ಮುಂದುವರೆಸಲಾಗುತ್ತಿದೆ.
- **ಸೇವಾ ಗುಣಮಟ್ಟವನ್ನು ಉತ್ತಮಪಡಿಸುವುದು ಹಾಗೂ ತನಿಖಾ ವಿಧಾನಗಳನ್ನು ಅಭಿವೃದ್ಧಿಪಡಿಸುವುದು** : ಕ್ರಮ ಕೈಗೊಳ್ಳಲಾಗುತ್ತಿದೆ.
- **ಆಡಳಿತದಲ್ಲಿ ನುರಿತ ವೃತ್ತಿಪರರ ಸೇವೆಗಳನ್ನು ಬಳಸಿಕೊಳ್ಳುವುದು**: ಪ್ರಮುಖ ಮತ್ತು ಕ್ಲಿಷ್ಟ ಸಮಸ್ಯೆಗಳು ಎದುರಾದಾಗ ಪುಣೆಯಲ್ಲಿರುವ ಸಿ.ಐ.ಆರ್.ಟಿ.ಸಂಸ್ಥೆಯ ಸಲಹೆಯನ್ನು ಪಡೆದುಕೊಳ್ಳಲಾಗುತ್ತಿದೆ. ಸ್ಥಳೀಯವಾಗಿ ವೃತ್ತಿಪರರು ಲಭ್ಯವಿದ್ದಲ್ಲಿ, ಅವರ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ ಮುಂದೆ ಪರಿಗಣಿಸಲಾಗುವುದು.

**ತಮ್ಮ ವಿಶ್ವಾಸಿ**

**ವ್ಯವಸ್ಥಾಪಕ ನಿರ್ದೇಶಕರು**